## ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 12 ಸಮನ್ವಯ 2010

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 17.02.2010.

M. D.
19 FEB 2010
M.D KPTCL
KPTCL

ಇಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಇಂಧನ ಇಲಾಖೆ,
ಬೆಂಗಳೂರು-1.

ಇವರಿಗೆ:

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ನಂ: 82, ಶಕ್ತಿ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-9.
3. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಕಾರ್ಪೊರೇಟ್ ಕಚೇರಿ, ಕೆ.ಆರ್. ವೃತ್ತ, ಬೆಂಗಳೂರು-1.
4. ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಕಾರ್ಪೊರೇಟ್ ಕಚೇರಿ, ನವನಗರ, ಹುಬ್ಬಳ್ಳಿ-580 025.
5. ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಕಾರ್ಪೊರೇಟ್ ಕಚೇರಿ, ಸ್ಟೇಷನ್ ರಸ್ತೆ, ಪರಿವಾರ್ ಹೋಟೆಲ್ ಎದುರುಗಡೆ, ಗುಲ್ಬರ್ಗಾ-585 102.
6. ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ, ಕಾರ್ಪೊರೇಟ್ ಕಚೇರಿ, ಅಂಚೆ ಪೆಟ್ಟಿಗೆ ಸಂಖ್ಯೆ: 200, ಪ್ಯಾರಾಡಿಂ ಪ್ಲಾಜಾ, ಎ. ಬಿ. ಶೆಟ್ಟಿ ವೃತ್ತ, ಮಂಗಳೂರು-575 001.
7. ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಕಾರ್ಪೊರೇಟ್ ಕಚೇರಿ, ನಂ: 927, ಎಲ್.ಜೆ. ಅವಿನ್ಯು ಕಮರ್ಷಿಯಲ್ ಕಾಂಪ್ಲೆಕ್ಸ್, ನ್ಯೂ ಕಾಂತರಾಜ್ ಅರಸ್ ರಸ್ತೆ, ಸರಸ್ವತಿಪುರಂ, ಮೈಸೂರು-570 009.
8. ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಎಂ.ಜಿ. ರಸ್ತೆ, ಬೆಂಗಳೂರು-1.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ನಂ: 19, ಕ್ವೀನ್ಸ್ ರಸ್ತೆ, ಬೆಂಗಳೂರು-52.
10. ವ್ಯವಸ್ಥಾಪಕ ನಿರ್ದೇಶಕರು, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್, ಕಾವೇರಿ ಭವನ, ಬೆಂಗಳೂರು-9.
11. ಮುಖ್ಯ ವಿದ್ಯುತ್ ಪರಿವೀಕ್ಷಕರು, ಮೆ:: ಪಾಲ್ ಅಸೋಸಿಯೇಟ್ಸ್, ನಂ : 32/1&2, 2ನೇ ಮಹಡಿ, ಕ್ರೆಸೆಂಟ್ ಟವರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-1.

Dir (Admn)

ಮಾನ್ಯರೆ,

ವಿಷಯ: ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಹೆಸರು ಮತ್ತು ಚಿಹ್ನೆಯ ದುರ್ಬಳಕೆ ತಡೆಯುವ ಬಗ್ಗೆ ಸೂಚನೆಗಳು.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸುತ್ತೋಲೆ ಸಂಖ್ಯೆ: ಸಿಆಸುಇ 88 ರಾರಾಆ 2009 ದಿನಾಂಕ: 16.12.2009ರ ಪ್ರತಿಯನ್ನು ಇದರೊಂದಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಲಗತ್ತಿಸಿ ಕಳುಹಿಸಿಕೊಡಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಎಸ್.ಜಿ. ಸಂಪತ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,
☎ 22034674.

7291

C F No: 12889

HRC 3

12 ನವೆಂಬರ್ 2010

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 88 ರಾರಾಆ 2009

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ: 16-12-2009.

**ಸುತ್ತೋಲೆ**

ವಿಷಯ: ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಹೆಸರು ಮತ್ತು ಚಿಹ್ನೆಯ ದುರ್ಬಳಕೆ ತಡೆಯುವ ಬಗ್ಗೆ ಸೂಚನೆಗಳು.

ಉಲ್ಲೇಖ: ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಪ್ರಧಾನ ಕಾರ್ಯದರ್ಶಿಯವರು ಮುಖ್ಯ ಕಾರ್ಯದರ್ಶಿಯವರಿಗೆ ದಿನಾಂಕ 25-9-2009ರಲ್ಲಿ ಬರೆದಿರುವ ಅರೆ ಸರ್ಕಾರಿ ಪತ್ರ ಸಂ. 15(38)/2008-Coord.

******

ಲಾಂಛನಗಳು ಮತ್ತು ಹೆಸರುಗಳ (ಅನುಚಿತ ಬಳಕೆ ತಡೆ) ಅಧಿನಿಯಮ 1950 ಇದು ಸದರಿ ಅಧಿನಿಯಮದ ಅನುಸೂಚಿಯಲ್ಲಿ ಸಮೂದಿಸಿರುವ ಸಂಸ್ಥೆಗಳ ಹೆಸರುಗಳು, ಲಾಂಛನಗಳು ಮುಂತಾದವುಗಳ ಬಳಕೆಯನ್ನು ನಿಯಂತ್ರಿಸುತ್ತದೆ. ಈ ಅಧಿನಿಯಮದ 3ನೇ ಪ್ರಕರಣದಲ್ಲಿ "ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ ಯಾರೇ ವ್ಯಕ್ತಿಯು, ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂತಹ ಪ್ರಕರಣಗಳಲ್ಲಿ ಮತ್ತು ಅಂತಹ ಷರತ್ತುಗಳ ಅಡಿಯಲ್ಲಿ ಹೊರತು, ಯಾವುದೇ ವ್ಯಾಪಾರ, ವ್ಯವಹಾರ, ಆಜೀವಿಕೆ ಅಥವಾ ವೃತ್ತಿಯ ಉದ್ದೇಶಕ್ಕಾಗಿ ಅಥವಾ ಯಾವುದೇ ಪೇಟೆಂಟ್‌ನ ಶೀರ್ಷಿಕೆಯಲ್ಲಿ ಅಥವಾ ಯಾವುದೇ ವ್ಯಾಪಾರಿ ಗುರುತು ಅಥವಾ ವಿನ್ಯಾಸದಲ್ಲಿ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಹೆಸರು ಅಥವಾ ಲಾಂಛನಗಳನ್ನು ಅಥವಾ ಅದರ ಯಾವುದೇ ಸೋಗಿನ ಅನುಕರಣೆಯನ್ನು ಕೇಂದ್ರ ಸರ್ಕಾರದ ಅಥವಾ ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ಪ್ರಾಧಿಕರಿಸಬಹುದಾದಂತಹ ಸರ್ಕಾರದ ಅಧಿಕಾರಿಯ ಪೂರ್ವಾನುಮೋದನೆಯಿಲ್ಲದೆ, ಬಳಕೆ ಮಾಡತಕ್ಕದ್ದಲ್ಲ ಅಥವಾ ಬಳಕೆಯನ್ನು ಮುಂದುವರಿಸತಕ್ಕದ್ದಲ್ಲ" ಎಂದು ಗೊತ್ತುಪಡಿಸಲಾಗಿದೆ. ಮುಂದುವರಿದು ಈ ಅಧಿನಿಯಮದ 4ನೇ ಪ್ರಕರಣ ಈ ಕೆಳಗಿನಂತಿದೆ:

K. JAIRAJ
Additional Chief Secretary to Government
Energy Department

(1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಯಾರೇ ಸಕ್ಷಮ ಪ್ರಾಧಿಕಾರಿಯು,

ಯಾವ ಹೆಸರು ಅಥವಾ ಲಾಂಛನವನ್ನು ಬಳಸಿದರೆ, 3ನೇ ಪ್ರಕರಣದ ಉಲ್ಲಂಘನೆಯಾಗುತ್ತದೋ

(ಎ) ಅಂಥ ಯಾವುದೇ ಹೆಸರನ್ನು ಹೊಂದಿರುವಂಥ ಯಾವುದೇ ಕಂಪನಿ, ಫರ್ಮು ಅಥವಾ ವ್ಯಕ್ತಿಗಳ ಇತರೆ ಸಂಸ್ಥೆಯನ್ನು ನೋಂದಣಿ ಮಾಡತಕ್ಕದ್ದಲ್ಲ, ಅಥವಾ

----2

SO

(ಬಿ) ಅಂಥ ಯಾವುದೇ ಲಾಂಛನ ಅಥವಾ ಹೆಸರನ್ನು ಹೊಂದಿರುವಂಥ ವ್ಯಾಪಾರಿ ಚಿನ್ಹೆ ಅಥವಾ ವಿನ್ಯಾಸವನ್ನು ನೋಂದಣಿ ಮಾಡತಕ್ಕದ್ದಲ್ಲ, ಅಥವಾ

(ಸಿ) ಯಾವುದೇ ಲಾಂಛನ ಅಥವಾ ಹೆಸರನ್ನು ಒಳಗೊಂಡಿರುವ ಶೀರ್ಷಿಕೆಯನ್ನು ಹೊಂದಿರುವಂಥ ಸಂಶೋಧನೆಯ ಸಂಬಂಧದಲ್ಲಿ ಪೇಟೆಂಟನ್ನು ನೀಡತಕ್ಕದ್ದಲ್ಲ.

(2) ಯಾವುದೇ ಲಾಂಛನವು, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಲಾಂಛನವಾಗಿದೆಯೇ ಅಥವಾ ಅದರದೇ ಸೋಗಿನ ಅನುಕರಣೆಯಾಗಿದೆಯೇ ಎಂಬ ಪ್ರಶ್ನೆಯು ಸಕ್ಷಮ ಪ್ರಾಧಿಕಾರದ ಮುಂದೆ ಉದ್ಭವಿಸಿದಲ್ಲಿ, ಸಕ್ಷಮ ಪ್ರಾಧಿಕಾರವು ಆ ಪ್ರಶ್ನೆಯನ್ನು ಕೇಂದ್ರ ಸರ್ಕಾರಕ್ಕೆ ಪರಿಶೀಲನೆಗೆ ಕಳುಹಿಸಿಕೊಡತಕ್ಕದ್ದು ಹಾಗೂ ಆ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವೇ ಅಂತಿಮವಾಗಿರತಕ್ಕದ್ದು."

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಹೆಸರು ಹಾಗೂ ಲಾಂಛನಗಳನ್ನು ನಮೂದು ಸಂಖ್ಯೆ 26 ಮತ್ತು 27ರಡಿಯಲ್ಲಿ ಲಾಂಛನಗಳು ಮತ್ತು ಹೆಸರುಗಳು (ಅನುಚಿತ ಬಳಕೆ ತಡೆ) ಅಧಿನಿಯಮ, 1950ರ ಅನುಸೂಚಿಯಲ್ಲಿ ಪಟ್ಟಿ ಮಾಡಲಾಗಿದೆ. ಆಯೋಗದ ಲಾಂಛನ ಮತ್ತು ಹೆಸರನ್ನು ಬಳಕೆ/ದುರ್ಬಳಕೆ ಮಾಡಿದ್ದಲ್ಲಿ ಅದಕ್ಕೆ ಅಧಿನಿಯಮದ ಉಪಬಂಧಗಳು ಅನ್ವಯಿಸುತ್ತವೆ ಮತ್ತು ಅಧಿನಿಯಮದ 5ನೇ ಪ್ರಕರಣದ ಪ್ರಕಾರ 3ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವಂತಹ ಯಾರೇ ವ್ಯಕ್ತಿಯು ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂತಹ ಜುಲ್ಮಾನೆಯೊಂದಿಗೆ ದಂಡನೀಯನಾಗತಕ್ಕದ್ದು.

ಕೆಲವು ಸರ್ಕಾರೇತರ ಸಂಘ ಸಂಸ್ಥೆಗಳು/ಸಂಘಟನೆಗಳು/ಸಂಸ್ಥೆಗಳು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಅಥವಾ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಹೋಲುವಂತಹ, ಉದಾಹರಣೆಗೆ "ರಾಷ್ಟ್ರೀಯ ಮಾನವ ಹಕ್ಕುಗಳ ಸಂಘ" ಅಥವಾ "ರಾಜ್ಯ ಮಾನವ ಹಕ್ಕುಗಳ ಸಂಘ" ಮುಂತಾದ ಪದಗಳನ್ನು ಬಳಸಿಕೊಂಡು ಸಂಸ್ಥೆ/ನ್ಯಾಸ/ಕಂಪನಿಗಳಾಗಿ ನೋಂದಣಿ ಮಾಡಿಸಿಕೊಳ್ಳುತ್ತಿವೆಯೆಂಬುದು ಆಯೋಗದ ಗಮನಕ್ಕೆ ಬಂದಿರುತ್ತದೆ. ಇಂತಹ ಪ್ರಕರಣಗಳಿಗೆ ಲಾಂಛನಗಳು ಮತ್ತು ಹೆಸರುಗಳು (ಅನುಚಿತ ಬಳಕೆಯ ತಡೆ) ಅಧಿನಿಯಮ, 1950ರ 4ನೇ ಪ್ರಕರಣದ ಉಪಬಂಧಗಳು ಅನ್ವಯಿಸುತ್ತವೆ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಹೆಸರು/ಗುರುತುಗಳ ದುರ್ಬಳಕೆಯ ಕೆಲವು ಘಟನೆಗಳೂ ಆಯೋಗದ ಗಮನಕ್ಕೆ ಬಂದಿರುತ್ತವೆ. ಕೆಲವು ಸಂಸ್ಥೆಗಳು, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮತ್ತು ರಾಜ್ಯ ಮಾನವ ಹಕ್ಕುಗಳ ಆಯೋಗಗಳೊಂದಿಗಿನ ತಮ್ಮ ಹೆಸರಿನ ಸಾದೃಶ್ಯತೆಯ ಅನುಕೂಲವನ್ನು ವಿವಿಧ ರೀತಿಯಲ್ಲಿ ಪಡೆದುಕೊಳ್ಳುತ್ತಿವೆ.

ಮೇಲ್ಕಂಡ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು ತಮ್ಮ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪ್ರಾಧಿಕಾರಗಳ ಗಮನವನ್ನು ಮೇಲ್ಕಂಡ ಅಧಿನಿಯಮದ

----3

ಉಪಬಂಧಗಳ ಕಡೆಗೆ ಸೆಳೆದು, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಅಥವಾ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಹೋಲುವಂತಹ ಹೆಸರು, ಗುರುತು ಇರುವ ಯಾವುದೇ ಸಂಸ್ಥೆಯು ನೋಂದಣಿಗಾಗಿ ಅರ್ಜಿ ಸಲ್ಲಿಸಿದಲ್ಲಿ, ಆ ವಿಷಯವನ್ನು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ತಿಳಿಸುತ್ತಾ, ಕೇಂದ್ರ ಸರ್ಕಾರದ ಪರಿಶೀಲನೆಗೂ ಕಳುಹಿಸಿ ಕೊಡಬೇಕೆಂದು ಅವಶ್ಯಕ ಸೂಚನೆಗಳನ್ನು ನೀಡಬೇಕೆಂದು ಕೋರಿದೆ.

ಕೇಂದ್ರ ಸರ್ಕಾರದಲ್ಲಿ ಇದಕ್ಕೆ ಸಂಬಂಧಿಸಿದ ಪರ್ಯಾನುಮೋದನಾ (ನೋಡಲ್) ಮಂತ್ರಾಲಯವು ಗ್ರಾಹಕರ ವ್ಯವಹಾರಗಳು ಮತ್ತು ಸಾರ್ವಜನಿಕ ವಿತರಣೆ ಮಂತ್ರಾಲಯವಾಗಿದ್ದು, ಗ್ರಾಹಕರ ವ್ಯವಹಾರಗಳ ಇಲಾಖೆಯಾಗಿದ್ದು ಈ ಕೆಳಕಂಡವರು ಸಂಬಂಧಪಟ್ಟ ಅಧಿಕಾರಿಗಳಾಗಿರುತ್ತಾರೆ:

1) Director (Internal Trade Division)
Department of Consumer Affairs
Room No.312-A, Shastri Bhavan
NEW DELHI.
E-mail: dirit-ca@nic.in
**Fax - 011 23385821**

2) Assistant Economic Advisor
Department of Consumer Affairs
Room No.307-A, Shastri Bhavan
NEW DELHI
E-mail: astteal-ca@nic.in
**Fax - 011 23385821**

(ಬಿ. ವೀರಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ರಾಜಕೀಯ)

***ಇವರಿಗೆ:-***

1) ಸರ್ಕಾರದ ಮುಖ್ಯ ಕಾರ್ಯದರ್ಶಿಯವರು
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು
3) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಪ್ರಧಾನ ಕಾರ್ಯದರ್ಶಿಗಳು/ಅಭಿವೃದ್ಧಿ ಆಯುಕ್ತರು
4) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
5) ಕಾರ್ಯದರ್ಶಿ, ರಾಜ್ಯ ಮಾನವ ಹಕ್ಕುಗಳ ಆಯೋಗ, ಬಹು ಮಹಡಿ ಕಟ್ಟಡ, 5ನೇ ಹಂತ
6) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
7) ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
8) ಎಲ್ಲಾ ಇಲಾಖಾ ಮುಖ್ಯಸ್ಥರುಗಳು